ದಿ: 02.07.2026

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 504/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಮಣ್ಣ | ಪ್ರಾ.ಸಾಃ 3 |
| ತಂದೆಯ/ಗಂಡನ ಹೆಸರು | : | ಹನುಮಂತಪ್ಪ | ಚಾಸಾಃ 3 |
| ವಯಸ್ಸು | : | 45 ವರ್ಷ | |
| ಕೆಲಸ | : | ವ್ಯವಸಾಯ | ಸಾ ಪ್ರ ಬೋ |
| ವಾಸ | : | ಗುಂಡಿಮಡು ಗೊಲ್ಲರಹಟ್ಟಿ | ದಿಃ02.07.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ಚಾಸಾ.2 ಮತ್ತು 6 ರವರು ಗೊತ್ತು. ಸಾಕ್ಷಿ ನಿಪಿ.2 ರ ಮಹಜರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಗುಂಡಿಮಡು ಗೊಲ್ಲರಹಟ್ಟಿಯಲ್ಲಿ ಮಾಡಿರುತ್ತೇನೆ. ಸದರಿ ಸಹಿಯನ್ನು ಯಾವಾಗ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಮಹಜರನ್ನು ಮಾಡಿಲ್ಲ ಮತ್ತು ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿಲ್ಲ. ಸಾಕ್ಷಿ ನೋಟೀಸಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

2. ದಿನಾಂಕ 28.01.2023 ರಂದು ಬೆಳಗ್ಗೆ 10 ರಿಂದ 10.45 ರವರೆಗೆ ಚಾಸಾ.3, 6 ಮತ್ತು ನನ್ನ ಸಮಕ್ಷಮದಲ್ಲಿ ಮಹಜರನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಮಹಜರಿನ ಕಾಲಕ್ಕೆ ಮುದ್ದೆಮಾಲು 1 ರ ಕಲ್ಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ.6 ರವರು ಸ್ಥಳದಲ್ಲಿ ಇದ್ದು, ಚಾಸಾ.6 ರವರು ಪೊಲೀಸರಿಗೆ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಮಹಜರನ್ನು ಜರುಗಿಸಿ, ಮು.ಮಾ.1 ರ ಕಲ್ಲನ್ನು ಅಮಾನತ್ತುಪಡಿಸಿಕೊಂಡಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 02.07.2026

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಕೆ.ಬಿ. ವಕೀಲರಿಂದಃ</u>**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇಲ್ಲ,**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು. )

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.